*ಸಿ.ಸಿ.ನಂ:685/2014*

ಪಿ ಡಬ್ಲ್ಯೂ - *17*

***ಪ್ರಮಾಣ ವಚನ ಬೋಧಿಸಲಾದ ದಿನಾಂಕಃ 24-07-2023***

**ಮುಂದುವರಿದ ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ**

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ಸರ್ವೆ ನಕ್ಷೆಯ ಜೆರಾಕ್ಸ್ ಪ್ರತಿಯಾಗಿದ್ದು , ಸದರಿ ದಾಖಲೆಯನ್ನು ನಿಪಿ-*9* ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-*9*(ಎ) ಎಂದು ಗುರುತಿಸಲಾಯಿತು.

***ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ ಎಲ್ ಆರ್ ವಕೀಲರವರಿಂದಃ-***

ನಿಪಿ-*9*ರ ನಕ್ಷೆಯನ್ನು ನಮ್ಮ ಇಲಾಖಾ ದಾಖಲಾತಿ ಮೇರೆಗೆ ತಯಾರಿಸಿದ್ದೇನೆಂದರೆ ಸರಿ. ಆರೋಪಿಗಳ ಹೆಸರುಗಳು ನಮ್ಮ ಇಲಾಖಾ ದಾಖಲಾತಿಗಳಲ್ಲಿ ನಮೂದಾಗಿದೆ ಎಂದರೆ ಸಾಕ್ಷಿ ಇಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ. ಅರಸೀಕೆರೆಯ ಸರ್ವೆ ನಂ.*7* ಕ್ಕೆ ಸಂಬಂಧಪಟ್ಟಂತೆ ಆರೋಪಿ ಹೆಸರಿನಲ್ಲಿ ಯಾವುದಾದರೂ ರೆವಿನ್ಯೂ ದಾಖಲಾತಿ ಇದೆಯೇ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಾನು ನಿಪಿ-*9*ರ ನಕ್ಷೆಯಲ್ಲಿ ತೋರಿಸಿರುವ ಜಾಗವು ಕೃಷಿ ಸಂಶೋಧನಾ ಕೇಂದ್ರದ ಕಾಂಪೌಂಡಿನಲ್ಲಿ ಬರುತ್ತದೆ ಎಂದರೆ ಸರಿ. ಸದರಿ ಜಾಗದ ಸ್ವಾಧೀನದಲ್ಲಿ ಕೃಷಿ ಸಂಶೋಧನಾ ಕೇಂದ್ರದವರು ಇದ್ದಾರೆಂದರೆ ಸರಿ. ನಾನು ನಮ್ಮ ಮೇಲಾಧಿಕಾರಿಗಳ ಮಾತನ್ನು ಕೇಳಿ ನಿಪಿ-*9*ರಂತೆ ಸುಳ್ಳು ನಕ್ಷೆಯನ್ನು ತಯಾರು ಮಾಡಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

*(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)*

*ಓ. ಕೇ. ಸ. ಇ. ಎ. ಒ.*

Sd/-

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ.ದಂ. ರವರು, ತರೀಕೆರೆ.**